(ಇಂದು ದಿನಾಂಕಃ **29/06/2026** ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯಪ್ರತಿಜ್ಞೆ ಬೋಧಿಸಲಾಯಿತು.)

**ಮುಂದುವರೆದ ಮುಖ್ಯ ವಿಚಾರಣೆ ಎದುರುದಾರರ ಪರ ಶ್ರೀ ಎಸ್.ಆರ್.ಪಿ. ವಕೀಲರಿಂದಃ-**

5. ಮುಖ್ಯ ವಿಚಾರಣೆಯಲ್ಲಿ ಹೇಳಿದ ವಿಷಯ ನಿಜ ಇರುತ್ತದೆ. ಈ ಪ್ರಕರಣದಲ್ಲಿ ಹಾಜರಾತಿ ವಿವರ ಸಹಿ ವರದಿ ನೀಡಿರುತ್ತೇನೆ.

**ಪಾಟೀ ಸವಾಲು ಅರ್ಜಿದಾರರ ಪರ ಶ್ರೀ ಎಂ.ಎನ್.ಪಿ. (ಕೆ.ಸಿ.ಪಿ.) ವಕೀಲರಿಂದಃ-**

6. ದಾಖಲೆಗಳನ್ನು ನೋಡದೇ ಅರ್ಜಿದಾರ ಗೈರು ಹಾಜರಿ ಉಳಿದ ದಿನಾಂಕ ಹೇಳಲು ಬರುವುದಿಲ್ಲ. ತನಗೆ ಹುಷಾರಿಲ್ಲವೆಂದು ತಿಳಿಸಿ ಆಸ್ಪತ್ರೆ ದಾಖಲೆ ಸಹಿತ ಅರ್ಜಿದಾರ ಅರ್ಜಿ ಸಲ್ಲಿಸಿದ್ದ ಎನ್ನುವುದು ಸುಳ್ಳು. ಆರೋಗ್ಯ ಸುಧಾರಿಸಿದ ನಂತರ ಅರ್ಜಿದಾರ ಒಂದು ಮನವಿ ಸಲ್ಲಿಸಿ ಕೆಲಸಕ್ಕೆ ಹಾಜರಾಗಲು ಅನುಮತಿ ಕೇಳಿದ್ದ ಎಂದರೆ ಅಂತಹ ಅನುಮತಿ ಕೊಡಲು ನನಗೆ ಅಧಿಕಾರ ಇರಲಿಲ್ಲ.

7. ವಿಚಾರಣೆ ಕಾಲಕ್ಕೆ ಮೂಲ ಹಾಜರಾತಿ ರಜಿಸ್ಟರ ಕಳಿಸುತ್ತೇವೆ. ಅದನ್ನು ಪರಿಶೀಲಿಸಿ ವಾಪಾಸು ಕಳಿಸಲಾಗುತ್ತದೆ. ಈ ಪ್ರಕರಣದಲ್ಲಿ ಮೂಲ ರಜಿಸ್ಟರ ಹಾಜರುಮಾಡಲಾಗಿದೆಯೋ ಇಲ್ಲವೋ ಗೊತ್ತಿಲ್ಲ. ಹಾಜರಾತಿ ವಿವರಗಳನ್ನು ನಮ್ಮ ಸಿಬ್ಬಂದಿ ತಯಾರಿಸಿದ ನಂತರ ನಾನು ಸಹಿ ಮಾಡಿರುತ್ತೇನೆ. ಮೂಲ ದಾಖಲೆಯನ್ನು ಪರಿಶೀಲಿಸಿರುತ್ತೇನೆ.

8. ಮೇಲಾಧಿಕಾರಿಗಳ ಮಾತು ಕೇಳಿ ಸುಳ್ಳು ವರದಿ ಮಾಡಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸುಳ್ಳು.

**ಮರು ವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಹಾವೇರಿ.